ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡರ		
ಶ್ರೀ ಅಪ್ಪಾಸಾಹೇಬ್ (ಅಪ್ಪು)	ಮುದ್ದೇಬಿಹಾಳ್	ಕನ್ನಡ
ಮಲ್ಲಪ್ಪ ಪಟ್ಟಣಶೆಟ್ಟಿ	ಬಿಜಾಪುರ	ಕನ್ನಡ
ಶ್ರೀ ಅಶೋಕ್ ಗುರಪ್ಪ ಹಬಾಡಿ	ಸಿಂಧಗಿ	ಕನ್ನಡ
ಶ್ರೀ ಬಾದರ್ಲಿ ಹಂಪನಗೌಡ	ಸಿಂಧನೂರ್	ಕನ್ನಡ
ಶ್ರೀ ಹೆಚ್.ಸಿ. ಬಾಲಕೃಷ್ಣ	ಮಾಗಡಿ	ಕನ್ನಡ
ಶ್ರೀ ಎಸ್. ಬಾಲರಾಜ್	ಕೊಳ್ಳೆಗಾಲ	ಕನ್ನಡ
ಶ್ರೀ ಬಂಡೆಪ್ಪ ಕಾಶ್ಯಂಪುರ್	ಬೀದರ್	ಕನ್ನಡ
ಶ್ರೀ ಜಿ. ಬಸವಣ್ಣಪ್ಪ	ಹೊಳೆಹೊನ್ನೂರು	ಕನ್ನಡ
ಶ್ರೀ ಬಸವರಾಜ್ ಭೀಮಣ್ಣ ಹಿಟ್ನಾಳ್ ಕೆ	ಕೊಪ್ಪಳ್	ಕನ್ನಡ
ಶ್ರೀ ಬಸವರಾಜ ರಾಯರೆಡ್ಡಿ	ಯಲಬುರ್ಗಾ	ಕನ್ನಡ
ಶ್ರೀ ಎ.ಎಸ್. ಬಸವರಾಜ್	ಅರಸೀಕೆರೆ	ಕನ್ನಡ
ಶ್ರೀ ಹೆಚ್.ಡಿ. ಬಸವರಾಜ್	ವೀರರಾಜ್ ಪೇಟೆ	ಕನ್ನಡ
ಶ್ರೀಮತಿ ಭಾಗೀರಥಿ ಟಿ.	ಕೊಟ್ಟೂರು	ಕನ್ನಡ
ಶ್ರೀ ಭರಮನಗೌಡ (ರಾಜು) ಅಲಗೌಡ ಕಾಗೆ	ಕಾಗವಾಡ	ಕನ್ನಡ
ಶ್ರೀ ಭೋಪಯ್ಯ ಕೆ.ಜಿ.	ಮಡಿಕೇರಿ	ಕನ್ನಡ
ಶ್ರೀ ಭೋಸ್‌ರಾಜ್ ಎನ್.ಎಸ್.	ಮಾನ್ವಿ	ಕನ್ನಡ
ಶ್ರೀ ಎನ್. ಚೆಲುವರಾಯಸ್ವಾಮಿ (ಸ್ವಾಮಿಗೌಡ)	ನಾಗಮಂಗಲ	ಕನ್ನಡ
ಶ್ರೀ ಎಸ್. ರಾಜೇಂದ್ರನ್	ಕೆ.ಜಿ.ಎಫ್.	ಆಂಗ್ಲ

3. ಪ್ರಮಾಣವಚನ ಸ್ವೀಕಾರದ ಬಗ್ಗೆ ಆಕ್ಷೇಪಣೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕನ್ನಡ ಚೆನ್ನಾಗಿ ಮಾತನಾಡುತ್ತಾರೆ. ಅವರು ಇಂಗ್ಲೀಷ್‌ನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡುವುದು ಸರಿಯಲ್ಲ. ಇದು ಯಾವ ರಾಜ್ಯ? ನಾವು ಯಾವ ರಾಜ್ಯದಲ್ಲಿದ್ದೇವೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಕನ್ನಡ ಆಡಳಿತ ಭಾಷೆ. ಇನ್ನು ಅವರು ಅರ್ಥ ಮಾಡಿಕೊಳ್ಳಬೇಕು. ನನ್ನ ಸ್ನೇಹಿತರು ಅವರು. ಕನ್ನಡ ಚೆನ್ನಾಗಿ ಮಾತನಾಡುತ್ತಾರೆ. ಇದು ಸರಿಯಲ್ಲ. ನಿಜವಾಗಿಯೂ ಇದು ಅಗೌರವ. ರಾಜ್ಯಕ್ಕೆ ಇದು ಒಳ್ಳೆಯ ಸೂಚನೆಯಲ್ಲ.

ಹಂಗಾಮಿ ಅಧ್ಯಕ್ಷರು:– ತಾವು ಹೇಳುವುದು ನಿಜ. ಕನ್ನಡ ಭಾಷೆ ಬಗ್ಗೆ ಅಭಿಮಾನ ಇರಬೇಕು. ನಾಡಿನ ಬಗ್ಗೆ ಅಭಿಮಾನ ಇರಬೇಕು. ಕನ್ನಡ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರೆ ಒಳ್ಳೆಯದು ಎಂದು ವಿನಂತಿ ಮಾಡಿಕೊಂಡಿದ್ದೇನೆ. ಆದರೆ ಕಾನೂನು ಪ್ರಕಾರ

ಸಂವಿಧಾನದ ಪ್ರಕಾರ ನಾನು ಇಂತಹ ಭಾಷೆಯಲ್ಲಿಯೇ ಪ್ರಮಾಣವಚನ ಸ್ವೀಕಾರ ಮಾಡಿ ಎಂದು ನಾನು ಮಾನ್ಯ ಸದಸ್ಯರಿಗೆ ಒತ್ತಾಯ ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ನಾನು ತಮಗೆ ಒತ್ತಾಯ ಮಾಡಿ ಎಂದು ಹೇಳುವುದಿಲ್ಲ. ಆದರೆ ಇದೊಂದು ಸಂಪ್ರದಾಯವಾಗಲಿ, ಸಂವಿಧಾನ ಅಥವಾ ಕಾನೂನು ಇದರ ಚೌಕಟ್ಟಿನಲ್ಲಿ ನಾವು ಬೇರೆ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡತಕ್ಕ ವಿಚಾರಕ್ಕೆ ಹೋಗುವುದು ಸರಿಯಲ್ಲ. ಇದು ಒಂದು ರಾಜ್ಯ. ನಾವು ಯಾವ ರಾಜ್ಯದಲ್ಲಿದ್ದೇವೆ? ನಾವು ಕರ್ನಾಟಕ ರಾಜ್ಯದಲ್ಲಿದ್ದೇವೆ. ಕರ್ನಾಟಕ ರಾಜ್ಯದ ಜನ ನಮಗೆ ಮತಕೊಟ್ಟಿದ್ದಾರೆ. ಅವರು ಕನ್ನಡದಲ್ಲಿ ಮಾತನಾಡುವುದಿಲ್ಲವೆಂದರೆ ಹೇಗೆ? ಇದು ಯಾವ ಸಭೆ? ನಾವು ಮಹಾರಾಷ್ಟ್ರದಲ್ಲಿದ್ದೇವೆಯೇ? ತಮಿಳುನಾಡಿನಲ್ಲಿದ್ದೇವೆಯೇ? ಇದು ಯಾವ ಸಭೆ? ಇದು ನನಗೆ ಬಹಳ ನೋವನ್ನುಂಟು ಮಾಡುತ್ತದೆ. ಇದು ಸರಿಯಲ್ಲ. ತಾವು ಒಪ್ಪುತ್ತೀರಿ. ನಾನು ತಮ್ಮ ಮಾತನ್ನು ನೂರಕ್ಕೆ ನೂರು ಒಪ್ಪುತ್ತೇನೆ. ಒತ್ತಾಯ ಮಾಡುವುದಕ್ಕೆ ಬರುವುದಿಲ್ಲವೆಂಬುದು ನನಗೆ ಗೊತ್ತಿದೆ. ಆದರೆ ನಾವು ಸದಸ್ಯರಾದವರ ತಿಳುವಳಿಕೆ ಇದು ಬರಬೇಕು.

ಹಂಗಾಮಿ ಅಧ್ಯಕ್ಷರು:– ನಾನು ಈಗಾಗಲೇ ಹೇಳಿದ್ದೇನೆ. ಆದಷ್ಟು ಮಟ್ಟಿಗೆ ಕನ್ನಡ ಭಾಷೆಯಲ್ಲೇ ಪ್ರಮಾಣ ವಚನ ಸ್ವೀಕರಿಸಿ ಎಂದು ಹೇಳಿದ್ದೇನೆ.

4. ಪ್ರಮಾಣ ವಚನ ಸ್ವೀಕಾರ (ಮುಂದು)

ಶ್ರೀ ಜಿ. ಚಂದ್ರಣ್ಣ	ದೇವನಹಳ್ಳಿ	ಕನ್ನಡ
ಶ್ರೀ ಚಂದ್ರಶೇಖರ ಡಿ. ಪಾಟೀಲ್ ರೇವೂರು	ಗುಲ್ಬರ್ಗಾ	ಕನ್ನಡ
ಶ್ರೀ ಸಿ. ಚೆನ್ನಿಗಪ್ಪ	ಕೊರಟಗೆರೆ	ಕನ್ನಡ
ಶ್ರೀ ಚರಂತಿ ಮಠ್ ವೀರಣ್ಣ ಚಂದ್ರಶೇಖರಯ್ಯ	ಬಾಗಲಕೋಟೆ	ಕನ್ನಡ
ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರ್‌ಗೌಡ	ಕಲಘಟಗಿ	ಕನ್ನಡ

11.30 ಪಿಎಂ

ಶ್ರೀ ದೇಸಾಯಿ ಶಿವಮುತ್ರಪ್ಪ ಮಡಿವಾಳಪ್ಪ	ಹೂವಿನಹಿಪ್ಪರಗಿ	ಕನ್ನಡ
ಶ್ರೀ ಜಿ.ಟಿ. ದೇವೇಗೌಡ	ಹುಣಸೂರ್	ಕನ್ನಡ
ಶ್ರೀ ಎಸ್.ಎಲ್. ಧರ್ಮೇಗೌಡ	ಬೀರೂರು	ಕನ್ನಡ
ಶ್ರೀ ಧ್ರುವನಾರಾಯಣ ಆರ್	ಸಂತೇಮಾರಹಳ್ಳಿ	ಕನ್ನಡ
ದಿಗಂಬರ್ ಯಶವಂತರಾವ್ ಪಾಟೀಲ್	ಖಾನಾಪುರ್	ಮರಾಠಿ

5. ಪ್ರಮಾಣ ವಚನ ಸ್ವೀಕಾರದ ಬಗ್ಗೆ ಆಕ್ಷೇಪಣೆ

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಕೇಸರಿಧುಮಾಲಿನವರು ಕನ್ನಡದಲ್ಲಿ ಮಾತನಾಡಬೇಕು. ಅವರು ಆಡುವ ಭಾಷೆ ತಮಗೂ ಅರ್ಥವಾಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಇದು ಬಹಳ ಅನ್ಯಾಯ. ಇದು ಒಳ್ಳೆಯ ಸೂಚನೆಯಲ್ಲ.

ಹಂಗಾಮಿ ಅಧ್ಯಕ್ಷರು:– ಮಾನ್ಯ ಸದಸ್ಯರು ದಯಮಾಡಿ ಸಹಕರಿಸಬೇಕಾಗಿ ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಇದು ಸರಿಯಾದ ನೀತಿಯಲ್ಲ. ಇದು ಏನೆಂದು ನನಗಂತೂ ಅರ್ಥವಾಗುವುದಿಲ್ಲ. ಇದು ಯಾವ ಭಾಷೆ? ಇದು ಯಾವ ರಾಜ್ಯ? ಇದು ಯಾವ